**CC 1321/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 1321/2023**

**ಸಿ ಡಬ್ಲ್ಯೂ -7**
**ಪಿ ಡಬ್ಲ್ಯೂ -5**

**ಸಾಕ್ಷಿಯ ಹೆಸರು -** **ರಾಮಪ್ಪ**
**ತಾಯಿಯ ಹೆಸರು -** **ಹನುಮಂತಮ್ಮ**
**ವಯಸ್ಸು -** **49 ವರ್ಷಗಳು**
**ಉದ್ಯೋಗ -** **ಖಾಸಗಿ ಕೆಲಸ**
**ವಾಸಸ್ಥಳ -** **ಹೊಸ ಮಲಪನಗುಡಿ**

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **4** ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿಃ **4(**ಬಿ**)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು **2022** ರಲ್ಲಿ ಹಂಪಿ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸರು ನನ್ನನ್ನು ಕರೆದು ಸಹಿ ಮಾಡು ಎಂದಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಯಾವುದೇ ವಸ್ತು ಜಪ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**CC 1321/2023**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 21-09-2022 ರಂದು ಹಂಪಿ ಪೋಲಿಸರು ನನ್ನನ್ನು ಮತ್ತು ಚಾಸಾ -8 ರವರನ್ನು ಠಾಣೆಗೆ ಕರೆಯಿಸಿ ಪ್ರಕರಣದ ಬಗೆಗ ಮಾಹಿತಿ ನೀಡಿದ್ದರು ಅಂದರೆ ಸರಿಯಲ್ಲ. ಆಗ ಚಾಸಾ -1 ರವರು ಆಗಲೇ ಜಪ್ತು ಮಾಡಿಕೊಂಡು ತಂದಿದ್ದ ಹೋಲಿಕೆ ಮಾಡುವ ಸಲುವಾಗಿ ತೆಗೆದಿರಿಸಿದ್ದ 1 ಕೆಜಿ ಪಡಿತರ ಅಕ್ಕಿಯನ್ನು ತನಿಖಾಧಿಕಾರಿಯ ಮುಂದೆ ನಮ್ಮ ಸಮಕ್ಷಮ ಹಾಜರು ಪಡಿಸಿದ್ದರು ಅಂದರೆ ಸರಿಯಲ್ಲ. ಸದರಿ ಅಕ್ಕಿಯನ್ನು ನಿಪಿಃ 4 ರ ಪಂಚನಾಮೆ ಅಡಿಯಲ್ಲಿ ಜಪುತ ಪಡಿಸಿಕೊಳ್ಳಲಾಗಿತ್ತು ಅಂದರೆ ಸರಿಯಲ್ಲ. ಮುದ್ದೆಮಾಲು -2 ಸದರಿ ಮಾದರಿ ಅಕ್ಕಿ ಇದ್ದ ಚೀಲವಾಗಿರುತ್ತದೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿಃ 4 ರಂತೆ ಜಪುತ ಪಂಚನಾಮೆ ಆಗಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದಃ** ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.